# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ(IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 19-03-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮಂಡ್ಯ ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

### ಹವಾಮಾನದ ಮುನ್ಸೂಚನೆ (20–03–2024 ರಿಂದ 24–03–2024)

| Parameters | 20.03.2024 | 21.03.2024 | 22.03.2024 | 23.03.2024 | 24.03.2024 |
|---|---|---|---|---|---|
| ಮಳೆ (ಮಿ.ಮೀ) | 0 | 1 | 1 | 1 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 36 | 36 | 33 | 34 | 36 |
| ಕನಿಷ್ಠ ಉಷ್ಣಾಂಶ ($^0$ಸೆ) | 17 | 17 | 17 | 17 | 17 |
| ಮೋಡ (ಆಕ್ಟ್‌ಸ್) | 1 | 3 | 3 | 3 | 2 |
| ಗರಿಷ್ಠ ಗಾಳಿಯ ತೇವಾಂಶ (%) | 54 | 60 | 79 | 74 | 56 |
| ಕನಿಷ್ಠ ಗಾಳಿಯ ತೇವಾಂಶ (%) | 23 | 23 | 32 | 32 | 21 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 8 | 9 | 11 | 10 | 11 |
| ಗಾಳಿಯ ದಿಕ್ಕು( ಡಿಗ್ರಿ) | 154 | 154 | 114 | 144 | 135 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಮಂಡ್ಯ ಜಿಲ್ಲೆಯಲ್ಲಿ ದಿನಾಂಕ: 20–03–2024 ರಿಂದ 24–03–2024 ವರೆಗೆ ಅಲ್ಪ ಮೋಡ ಕವಿದ ವಾತಾವರಣವಿದ್ದು, ಹಗುರ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 33–36 °C. ಮತ್ತು ಕನಿಷ್ಠ ಉಷ್ಣಾಂಶ 17°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 54–79% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 21–32% ವರೆಗೆ ಮತ್ತು ಗಾಳಿಯು ಗಂಟೆಗೆ 8–11 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

### ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

- ಬೆಳೆಗಳ ಉಳಿಕೆ ಅಥವಾ ಗೊಬ್ಬರದ ಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳಬಹುದು.
- ಬೆಳೆಗಳಲ್ಲಿ ಮುಖ್ಯವಾಗಿ ಬೆಳೆವಣಿಗೆ ನಿರ್ಣಾಯಕಹಂತದಲ್ಲಿ ಮಳೆ ಆಗದೇ ಇದ್ದಲ್ಲಿ ರೈತರು ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಒದಗಿಸಬೇಕು.
- ಹಿಂಗಾರು ಬೆಳೆಗಳನ್ನು ಕೊಯ್ಲು ಮಾಡಿದ ನಂತರ ಆಳವಾದ ಬೇಸಿಗೆ ಉಳುಮೆ ಮಾಡಿ ಸೂರ್ಯನ ತೀಕ್ಷ್ಣ ಕಿರಣಗಳು ಮಣ್ಣನ್ನು ಉರುಳಿಸುವುದರಿಂದ ಮೊಟ್ಟೆಗಳು, ಮರಿಹುಳುಗಳು ಮತ್ತು ಕೋಶಗಳನ್ನು ಕೊಲ್ಲುತ್ತದೆ. ಇದರಿಂದ ಮುಂದಿನ ಬೆಳೆಗಳಿಗೆ ಹರಡಬಹುದಾದ ಕೀಟಬಾದೆಯನ್ನು ತಪ್ಪಿಸಬವುದು.
- ಬೇಸಿಗೆಯ ಉಳುಮೆಯ ಮೊದಲು ಹಿಂಗಾರು ಬೆಳೆಗಳನ್ನು ಕೊಯ್ಲು ಮಾಡಿದ ನಂತರ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಣ್ಣಿನ ಪರೀಕ್ಷೆಯಿಂದ ಮಾಡಿಸಬೇಕು.

| | | |
|---|---|---|
| • ಮುಂದಿನ 4–5 ದಿನಗಳಲ್ಲಿ ಒಣಹವೆ ಮುಂದುವರಿಯುವ ಸಾದ್ಯತೆ ಇರುವುದರಿಂದ ರೈತರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ನೀರನ್ನು ಹಾಯಿಸುವುದು ಸೂಕ್ತ. | | |
| ಮೆಣಸಿನಕಾಯಿ | ಥ್ರಿಪ್ಸ್ ಮತ್ತು ನುಸಿ | ಈ ಕೀಟಗಳು ಎಲೆಗಳಿಂದ ರಸ ಹೀರುವುದರಿಂದ ಎಲೆಗಳು ಮೇಲ್ಮುಖವಾಗಿ ಮತ್ತು ಕೆಳಮುಖವಾಗಿ ಮುದುಡಿ ಕೊಂಡಿರುತ್ತವೆ. ಉದ್ದವಾದ ತೊಟ್ಟು, ಹಳದಿ ಮಿಶ್ರಿತ ಹಸಿರು ಎಲೆಗಳು, ಎಲೆಗಳ ಗಾತ್ರ ಚಿಕ್ಕದಾಗಿರುತ್ತದೆ, ಸಸ್ಯಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇದರ ಹತೋಟಿಗಾಗಿ ಡೈಕೊಫಾಲ್ 18.5 ಇಸಿ. – 2.5 ಮಿಲೀ. ಅಥವಾ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. – 0.3 ಮಿಲೀ./ಲೀ. ನೀರಿಗೆ ಸೇರಿಸಿ ಸಿಂಪಡಿಸುವುದು. ಎಕರೆಗೆ 200 ಲೀ. ಸಿಂಪರಣಾ ದ್ರಾವಣಬೇಕಾಗುತ್ತದೆ. |
| ಮುಸುಕಿನ ಜೋಳ | ಸೈನಿಕ ಹುಳು | 5% (ಕಡಿಮೆ) ಹಾನಿ ಕಂಡು ಬಂದಲ್ಲಿ: 5% ಬೇವಿನ ಬೀಜದ ಸಾರ (NSKE) ಅಥವಾ ಅಜಾಡಿರಾಕ್ಟಿನ್ 1500 ppm @ 5ಮಿಲಿ/ಲೀಟರ್ (1 ಲೀಟರ್/ಎಕರೆ) ನೀರಿನ ಬಳಕೆ.<br>10% ಹಾನಿ– ಶಿಫಾರಸು ಮಾಡಲಾದ ಯಾವುದೇ ಕೀಟನಾಶಕಗಳನ್ನು ಗಿಡಗಳ ಸುಳಿಗೆ ಸಿಂಪಡಿಸಬೇಕು ಅಂದರೆ, ಕ್ಲೋರಂಟ್ರಾನಿಲಿಪ್ರೋಲ್ 18,5 ಎಸ್.ಸಿ (80 ಮಿಲಿ/ಎಕರೆ) @ 0.4 ಮಿ.ಲೀ/ಲೀಟರ್ ಅಥವಾ ಸ್ಪಿನೆಟೋರಮ್ 11.7 % ಎಸ್.ಸಿ (100ಮಿ.ಲೀ/ಎಕರೆ) @ 0.5 ಮಿ.ಲೀ/ಲೀಟರ್ ಅಥವಾ ಎಮಾಮೆಕ್ಟಿನ್ ಬೆಂಜೊಯೇಟ್ 5% ಎಸ್.ಜಿ (80ಗ್ರಾಂ/ಎಕರೆ) @0.4ಗ್ರಾಂ/ಲೀಟರ್. |
| ಬೀನ್ಸ್ | ಹಳದಿ ನಂಜು ರೋಗ | ಹಳದಿ ನಂಜುರೋಗ ಕಂಡುಬಂದಾಗ ಮೊದಲಿಗೆ ರೋಗ ಬಂದ ಗಿಡಗಳನ್ನು ಕಿತ್ತು ನಾಶಪಡಿಸಬೇಕು. ನಂತರ 0.5 ಮಿ.ಲೀ. ಇಮಿಡೋಕ್ಲೋಪ್ರಿಡ್ 17.5 ಎಸ್.ಎಲ್. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕು. ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗದಿದ್ದಲ್ಲಿ 15 ದಿವಸಗಳ ನಂತರ ಇದೇ ಸಿಂಪರಣೆಯನ್ನು ಪುನರಾವರ್ತಿಸಿ. |
| ಬಾಳೆ | ಹುಸಿಕಾಂಡ ಕೊರಕ | ಮರಿ ಹುಳುಗಳು ಹುಸಿ ಕಾಂಡವನ್ನು ಕೊರೆಯುತ್ತವೆ. ಹುಸಿ ಕಾಂಡದ ಮೇಲೆ ರಂಧ್ರಗಳಿದ್ದು ಗಾಳಿಬೀಸಿದಾಗ ಮರಗಳು ಆ ಭಾಗಕ್ಕೆ ಸರಿಯಾಗಿ ಮುರಿಯುತ್ತವೆ.<br>ಈ ಹುಳು ಬಾಧಿತ ಹುಸಿ ಕಾಂಡಕ್ಕೆ ಭೂಮಿಯಿಂದ ಒಂದು ಅಡಿ ಎತ್ತರದಲ್ಲಿ 3.0 ಮಿಲೀ. ಕ್ಲೋರೋಪೈರಿಫಾಸ್ 20 ಇಸಿ. ಅಥವಾ 3.0 ಮಿಲೀ. ಡೈಮಿಥೋಯೇಟ್ 30 ಇಸಿ. ಯನ್ನು 5.0 ಮಿಲೀ. ನೀರಿಗೆ ಸೇರಿಸಿ ಪಿಚಕಾರಿಯ ಸಹಾಯದಿಂದ ಕಾಂಡಕ್ಕೆ ಚುಚ್ಚುವುದು. |
| ಟೊಮ್ಯಾಟೊ | ಕಾಯಿ ಕೊರಕ | ಪ್ರತೀ 25 ಸಾಲು ಟೊಮ್ಯಾಟೊ ಬೆಳೆಗೆ ಒಂದು ಸಾಲು ಚೆಂಡುಮಲ್ಲಿಗೆ ಗಿಡಗಳನ್ನು ನೆಡುವುದು. ಚೆಂಡುಮಲ್ಲಿಗೆಯ ಗಿಡಗಳ ವಯಸ್ಸು 35 – 40 ದಿನಗಳಾಗಿರಬೇಕು. ಶೇ. 10 ರಷ್ಟು ಹಾನಿಯ ಚಿಹ್ನೆಗಳು ಕಂಡು ಬಂದಲ್ಲಿ ಶೇ. 4 ಬೇವಿನ ಬೀಜದ ಕಷಾಯವನ್ನು ಸಿಂಪಡಿಸಬೇಕು.<br>ಪೀಡೆಯ ತೀವ್ರತೆ ಹೆಚ್ಚಾದಾಗ 1.0 ಗ್ರಾಂ ಮಿಥೋಮಿಲ್ 40 ಎಸ್.ಪಿ ಸಿಂಪರಣೆ ಅಗತ್ಯ ಎಕರೆಗೆ 200 – 250 ಲೀಟರ್ ಸಿಂಪರಣಾ ದ್ರಾವಣ ಬೇಕಾಗುತ್ತದೆ. |
| ಅಲಸಂದೆ | ಸಸ್ಯಹೇನು | ನೂರಾರು ಸಸ್ಯಹೇನುಗಳು ಸುಳಿ, ಎಲೆ, ಹೂ, ಮೊಗ್ಗು, ಕಾಯಿಗಳಿಂದ ರಸ ಹೀರುತ್ತಿರುತ್ತವೆ. ಎಲೆಗಳು ಮುದುಡುವುದು, ಕಾಯಿಗಳಲ್ಲಿನ ಬೀಜ ಚೀಕಲಾಗುವುದು. ಕೆಳಗಿನ ಎಲೆಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು. ಕೀಟ ಬಾದೆ ಕಾಣಿಸಿಕೊಂಡಾಗ ಲೀ. ನೀರಿಗೆ 1.7 ಮಿ.ಲೀ. ಡೈಮಿಥೋಯೇಟ್ 30 ಇಸಿ. ಅಥವಾ ಅಜಾಡಿರಕ್ಟಿನ್ 1500 ppm @ 5ಮಿಲಿ/ಲೀಟರ್ ಸೇರಿಸಿ ಸಿಂಪಡಿಸುವುದು. ಎಕರೆಗೆ 200 ಲೀ. ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. |
| ಕಲ್ಲಂಗಡಿ | ರಸಹೀರುವ ಕೀಟಗಳು | ರಸಹೀರು ಕೀಟಗಳ ನಿರ್ವಹಣೆಗಾಗಿ ಎಕರೆಗೆ 8–10 ಹಳದಿ ಅಂಟು ಬಲೆಗಳನ್ನು ಬಳಸಬೇಕು. ಹಾನಿಯು ಹೆಚ್ಚು ಕಂಡು ಬಂದಲ್ಲಿ 1 ಮಿ.ಲಿ. ಮೆಲಾಥಿಯಾನ್ 50 ಇ.ಸಿ ಎಂಬ ಔಷದಿಯನ್ನು 1 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. |
| ಬೇಸಿಗೆ ತಿಂಗಳಲ್ಲಿ ಪಶು ಸಂಗೋಪನಾ ಸಲಹೆಗಳು | • ಬಿಸಿಲು ಹೆಚ್ಚಾಗಿರುವುದರಿಂದ ಮಧ್ಯಾಹ್ನದಲ್ಲಿ ರಾಸುಗಳಿಗೆ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೊ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>• ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಹಾಡುವಂತೆ ವ್ಯವಸ್ಥೆ ಮಾಡಬೇಕು.<br>• ಸ್ವಚ್ಛವಾದ ನೀರನ್ನು ಕುಡಿಸಬೇಕು.<br>• ರಾಸುಗಳನ್ನು ಮಧ್ಯಾಹ್ನದ ಬಿಸಿಲಿಗೆ ಮೇಯಲು ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ಮೇಯಲು ಬಿಡಬೇಕು. | |

**ತಾಲ್ಲೂಕುವಾರು ಹವಾಮಾನದ ಮುನ್ಸೂಚನೆ (20–03–2024 ರಿಂದ 24–03–2024)**

| ಕೃಷ್ಣರಾಜಪೇಟೆ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0.3 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 34 | 35 | 34 | 34 | 34 |
| ಕನಿಷ್ಠ ಉಷ್ಣಾಂಶ (°ಸೆ) | 18 | 18 | 18 | 18 | 19 |
| ಮೋಡ (ಆಕ್ಟ್‌ಸ್) | 1 | 3 | 2 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 64 | 88 | 69 | 68 | 72 |
| ಕನಿಷ್ಠ ಗಾಳಿಯ ತೇವಾಂಶ (%) | 23 | 20 | 27 | 26 | 22 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 7 | 10 | 13 | 8 | 8 |
| ಗಾಳಿಯ ದಿಕ್ಕು( ಡಿಗ್ರಿ) | 165 | 180 | 135 | 162 | 135 |

| ಮದ್ದೂರು | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 36 | 36 | 35 | 35 | 35 |
| ಕನಿಷ್ಠ ಉಷ್ಣಾಂಶ (°ಸೆ) | 20 | 21 | 21 | 21 | 22 |
| ಮೋಡ (ಆಕ್ಟ್‌ಸ್) | 0 | 0 | 1 | 2 | 1 |
| ಗರಿಷ್ಠ ಗಾಳಿಯ ತೇವಾಂಶ (%) | 46 | 66 | 69 | 54 | 50 |
| ಕನಿಷ್ಠ ಗಾಳಿಯ ತೇವಾಂಶ (%) | 18 | 17 | 25 | 21 | 19 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 9 | 12 | 11 | 11 |
| ಗಾಳಿಯ ದಿಕ್ಕು( ಡಿಗ್ರಿ) | 135 | 153 | 135 | 144 | 144 |


| ಮಳವಳ್ಳಿ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 35 | 35 | 34 | 34 | 34 |
| ಕನಿಷ್ಠ ಉಷ್ಣಾಂಶ (°ಸೆ) | 19 | 21 | 20 | 20 | 21 |
| ಮೋಡ (ಆಕ್ಟ್‌ಸ್) | 0 | 0 | 1 | 1 | 1 |
| ಗರಿಷ್ಠ ಗಾಳಿಯ ತೇವಾಂಶ (%) | 48 | 61 | 67 | 56 | 49 |
| ಕನಿಷ್ಠ ಗಾಳಿಯ ತೇವಾಂಶ (%) | 18 | 17 | 25 | 21 | 19 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 9 | 11 | 10 | 10 |
| ಗಾಳಿಯ ದಿಕ್ಕು( ಡಿಗ್ರಿ) | 135 | 150 | 122 | 117 | 135 |

| ಮಂಡ್ಯ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 35 | 35 | 34 | 34 | 35 |
| ಕನಿಷ್ಠ ಉಷ್ಣಾಂಶ (°ಸೆ) | 19 | 20 | 20 | 20 | 21 |
| ಮೋಡ (ಆಕ್ಟ್‌ಸ್) | 1 | 0 | 1 | 2 | 1 |
| ಗರಿಷ್ಠ ಗಾಳಿಯ ತೇವಾಂಶ (%) | 48 | 77 | 65 | 56 | 56 |
| ಕನಿಷ್ಠ ಗಾಳಿಯ ತೇವಾಂಶ (%) | 18 | 18 | 25 | 21 | 19 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 10 | 11 | 10 | 10 |
| ಗಾಳಿಯ ದಿಕ್ಕು( ಡಿಗ್ರಿ) | 148 | 135 | 122 | 135 | 153 |


| ನಾಗಮಂಗಲ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0 | 0.3 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 35 | 36 | 35 | 35 | 35 |
| ಕನಿಷ್ಠ ಉಷ್ಣಾಂಶ (°ಸೆ) | 19 | 20 | 20 | 20 | 21 |
| ಮೋಡ (ಆಕ್ಟ್‌ಸ್) | 1 | 0 | 3 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 52 | 82 | 68 | 58 | 57 |
| ಕನಿಷ್ಠ ಗಾಳಿಯ ತೇವಾಂಶ (%) | 22 | 19 | 27 | 23 | 20 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 10 | 14 | 10 | 10 |
| ಗಾಳಿಯ ದಿಕ್ಕು( ಡಿಗ್ರಿ) | 150 | 135 | 135 | 150 | 148 |



| ಪಾಂಡವಪುರ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0.1 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 34 | 35 | 33 | 34 | 34 |
| ಕನಿಷ್ಠ ಉಷ್ಣಾಂಶ (°ಸೆ) | 18 | 19 | 19 | 19 | 19 |
| ಮೋಡ (ಆಕ್ಟ್‌ಸ್) | 1 | 3 | 2 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 54 | 89 | 67 | 62 | 67 |
| ಕನಿಷ್ಠ ಗಾಳಿಯ ತೇವಾಂಶ (%) | 20 | 20 | 27 | 25 | 21 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 11 | 12 | 9 | 9 |
| ಗಾಳಿಯ ದಿಕ್ಕು( ಡಿಗ್ರಿ) | 152 | 158 | 135 | 154 | 146 |

| ಶ್ರೀರಂಗಪಟ್ಟಣ | | | | | |
|---|---|---|---|---|---|
| **Parameter** | **20.03.2024** | **21.03.2024** | **22.03.2024** | **23.03.2024** | **24.03.2024** |
| ಮಳೆ (ಮಿ.ಮೀ) | 0 | 0 | 0 | 0.1 | 0 |
| ಗರಿಷ್ಠ ಉಷ್ಣಾಂಶ (°ಸೆ) | 34 | 34 | 33 | 33 | 33 |
| ಕನಿಷ್ಠ ಉಷ್ಣಾಂಶ (°ಸೆ) | 18 | 18 | 18 | 19 | 19 |
| ಮೋಡ (ಆಕ್ಟ್ಸ್) | 2 | 0 | 2 | 3 | 2 |
| ಗರಿಷ್ಠ ಗಾಳಿಯ ತೇವಾಂಶ (%) | 53 | 86 | 67 | 60 | 64 |
| ಕನಿಷ್ಠ ಗಾಳಿಯ ತೇವಾಂಶ (%) | 20 | 20 | 27 | 24 | 20 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 9 | 11 | 12 | 10 | 9 |
| ಗಾಳಿಯ ದಿಕ್ಕು( ಡಿಗ್ರಿ) | 152 | 158 | 126 | 154 | 146 |




**Vegetation Condition Index**



| Temperature Condition Index | Forecasted soil moisture |
|---|---|
|  |  |





ಹೆಚ್ಚಿನ ತಾಪಮಾನ, ಕಡಿಮೆ ಮಣ್ಣಿನ ತೇವಾಂಶ ಮತ್ತು ಕಡಿಮೆ ಸಸ್ಯವರ್ಗವನ್ನು ಎದುರಿಸುತ್ತಿರುವ ರೈತರು ಹನಿ ನೀರಾವರಿಯಂತಹ ಸಮರ್ಥ ನೀರಾವರಿ ತಂತ್ರಗಳಿಗೆ ಆದ್ಯತೆ ನೀಡಬೇಕು ಮತ್ತು ತೇವಾಂಶವನ್ನು ಸಂರಕ್ಷಿಸಲು ಮತ್ತು ಆವಿಯಾಗುವಿಕೆಯನ್ನು ತಗ್ಗಿಸಲು ಮಲ್ಚಿಂಗ್ ಅನ್ನು ಅಳವಡಿಸಬೇಕು. ಬರ-ನಿರೋಧಕ ಬೆಳೆಗಳನ್ನು ಆರಿಸಿಕೊಳ್ಳುವುದು ಮತ್ತು ಹೊದಿಕೆ ಬೆಳೆಗಳಂತಹ ಮಣ್ಣಿನ ಸಂರಕ್ಷಣಾ ವಿಧಾನಗಳನ್ನು ಬಳಸಿಕೊಳ್ಳುವುದು ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

- ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು"ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ||. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು